

# ಉಡುಗೆ–ತೊಡುಗೆಯಲ್ಲಿ
# ತ್ರಿವರ್ಣ

■ ರೂಪಾ ಕೆ.ಎಂ.

ನರನಾಡಿಗಳಲ್ಲಿ ಅಡಗಿರುವ ದೇಶಭಕ್ತಿಯು ಉಡುಗೆ–ತೊಡುಗೆಗಳಲ್ಲಿ ಕಂಡಾಗ ಅಭಿಮಾನ ದುಪ್ಪಟ್ಟಾಗುತ್ತದೆ. ರಾಷ್ಟ್ರದ ಹೆಮ್ಮೆಯನ್ನು ತೊಟ್ಟಾಗ ಆಗುವ ಅನುಭವ ಅವರ್ಣನೀಯ. ದೇಶದ ಧ್ವಜವನ್ನು ಬಿಂಬಿಸುವ ಚಿತ್ತಾರಗಳನ್ನು, ಬಣ್ಣಗಳನ್ನು ಉಡುಪು ಮತ್ತು ಆ್ಯಕ್ಸೆಸರಿಸ್ ಹಾಗೂ ಬ್ಯಾಗ್‌ಗಳಲ್ಲಿ ಹೆಚ್ಚಾಗಿ ಕಾಣಬಹುದು.

ಟಿ–ಶರ್ಟ್‌ಗಳು, ಕುರ್ತಾಗಳು, ಸ್ಕಾರ್ಫ್‌ಗಳು, ಸೀರೆಗಳು, ದುಪಟ್ಟಾಗಳು, ಮಕ್ಕಳ ಫ್ರಾಕ್ಸ್ ಹಾಗೂ ಟಿ–ಶರ್ಟ್‌ಗಳನ್ನು ಸಾಮಾನ್ಯವಾಗಿ ಭಾರತೀಯ ಧ್ವಜದ ಬಣ್ಣ ಹಾಗೂ ವಿನ್ಯಾಸಗಳಿಂದ ಮಾಡಲಾಗುತ್ತದೆ.

ಭಾರತೀಯ ಧ್ವಜದಲ್ಲಿರುವ ತ್ರಿವರ್ಣ ಅಂದರೆ ಕೇಸರಿ, ಬಿಳಿ, ಹಸಿರು ಬಣ್ಣ ಹಾಗೂ ವಿನ್ಯಾಸವನ್ನು ಹೊಂದಿರುವ ಸೀರೆಯನ್ನು ತ್ರಿವರ್ಣ ಸೀರೆ ಎಂದೇ ಕರೆಯಲಾಗುತ್ತದೆ. ಕೆಲವೊಮ್ಮೆ ಅಶೋಕ ಚಕ್ರವೂ ಸೇರಿರುತ್ತದೆ. ಹೀಗೆ ನೇರವಾಗಿ ಅಲ್ಲದೇ ಇದ್ದರೂ ಮಿಕ್ಸ್ ಆ್ಯಂಡ್ ಮ್ಯಾಚ್ ಪರಿಕಲ್ಪನೆಯಲ್ಲಿಯೂ ತ್ರಿವರ್ಣ ಸೀರೆಯನ್ನು ರೂಪಿಸಿಕೊಳ್ಳಬಹುದು. ಕೇಸರಿ ಅಂಚಿರುವ, ಶುಭ್ರ ಬಿಳಿಯ ಖಣ ಸೀರೆಯಿದ್ದರೆ, ಅದಕ್ಕೆ ಹೊಂದುವಂತೆ ಹಸಿರು ರವಿಕೆ ತೊಟ್ಟು ರಾಷ್ಟ್ರಪ್ರೇಮವನ್ನು ಮೆರೆಯಬಹುದು.

**ಕುರ್ತಾ– ದುಪಟ್ಟಾಗಳು:** ಮೂರು ಬಣ್ಣಗಳನ್ನು ಹೊಂದಿರುವ ಮುದ್ದಾದ ದುಪಟ್ಟಾಗಳು ಈಗೀಗ ಹೊಸ ಆಕರ್ಷಣೆ. ಶುಭ್ರ ಬಣ್ಣದ ಕುರ್ತಾ ಹಾಗೂ ಪೈಜಾಮದ ಮೇಲೆಯೂ ತ್ರಿವರ್ಣವಿರುವ ದುಪಟ್ಟಾವನ್ನು ಧರಿಸಬಹುದು. ಇಲ್ಲವಾದರೆ ಬಿಳಿಯ ಕುರ್ತಾದ ಮೇಲೆ ಹಸಿರು ಮತ್ತು ಕೇಸರಿ ಬಣ್ಣದ ದುಪಟ್ಟಾ ಧರಿಸಬಹುದು. ಈಗಂತೂ ಮಕ್ಕಳ ಕುರ್ತಾಗಳು ಅದರಲ್ಲಿ ಹಾಫ್ ಡೈಡ್ ಮಾಡಿರುವ ಓವರ್ ಸೈಜ್ಡ್ ಟಿ–ಶರ್ಟ್‌ಗಳು, ಮೂರು ಬಣ್ಣಗಳಲ್ಲಿ ಅದ್ದಿ ತೆಗೆದ ಡೈಡ್ ಕುರ್ತಾಗಳು ಮಕ್ಕಳಿಗೆ ಹಿತವೆನಿಸುತ್ತವೆ. ಖಾದಿ ಕಾಟನ್, ಲಿನಿನ್ ಬಟ್ಟೆಯಲ್ಲಿ ಇಂಥ ವಿನ್ಯಾಸಗಳನ್ನು ಹೆಚ್ಚಾಗಿ ಕಾಣಬಹುದು.

ಈಗಂತೂ ಮುದ್ರಿತ ಅಥವಾ ಕಸೂತಿ ಮಾಡಿದ ಧ್ವಜ ವಿನ್ಯಾಸವಿರುವ ಟೋಟೆ ಬ್ಯಾಗ್‌ಗಳು, ಕ್ಯಾನ್ವಾಸ್‌ನಲ್ಲಿ ಮಾಡಿದ ಕ್ಯಾರಿ ಬ್ಯಾಗ್‌ಗಳು, ವಿವಿಧ ಗಾತ್ರ ಹಾಗೂ ಶೈಲಿಯಲ್ಲಿರುವ ಬ್ಯಾಕ್‌ಪ್ಯಾಕ್‌ಗಳನ್ನು ನೋಡಬಹುದು. ಸೂಟ್‌ಕೇಸ್‌ಗಳು, ಡಫಲ್‌ಚೀಲಗಳು, ಲಗೇಜ್ ಬ್ಯಾಗ್‌ಗಳ ಮೇಲೂ ರಾಷ್ಟ್ರೀಯತೆ ಸೂಚಿಸುವ ಧ್ವಜದ ಬಣ್ಣ ಹಾಗೂ ವಿನ್ಯಾಸಗಳಿರುತ್ತವೆ.

ತ್ರಿವರ್ಣಕ್ಕೆ ಹೆಚ್ಚು ಆದ್ಯತೆ ಕೊಟ್ಟು ಮಾಡಿರುವ ಆಭರಣಗಳಿಗೆ ಉತ್ತಮ ಬೇಡಿಕೆ. ಕಿತ್ತಳೆ, ಬಿಳಿ ಮತ್ತು ಹಸಿರು ಮಣಿಗಳನ್ನು ಒಳಗೊಂಡಿರುವ ನೆಕ್ಲೇಸ್‌ಗಳು ವ್ಯಾಪಕವಾಗಿ ಲಭ್ಯವಿದೆ. ಕೆಲವು ವಿನ್ಯಾಸಗಳು ಧ್ವಜದ ಬಣ್ಣಗಳನ್ನು ಹೊಂದಿರುವ ಪೆಂಡೆಂಟ್ ಮತ್ತು ಭಾರತೀಯ ನಕ್ಷೆಯನ್ನು ಒಳಗೊಂಡಿರುತ್ತದೆ.

ತ್ರಿವರ್ಣ ಜುಮ್ಕಿ ದೇಶಭಕ್ತಿಯನ್ನು ವ್ಯಕ್ತಪಡಿಸಲು ಜನಪ್ರಿಯ ಆಯ್ಕೆ ಎನಿಸಿವೆ. ಹೀಗೆ ದೊಡ್ಡ ಜುಮ್ಕಿ ತೊಟ್ಟಾಗ ಸರಳವಾದ ಉಡುಗೆ ಇದ್ದರೆ ಚಂದ ಕಾಣುತ್ತದೆ. ಕೇಸರಿ, ಬಿಳಿ,ಹಸಿರು ಬಣ್ಣದ ಬಳೆಗಳನ್ನು ಹಾಕಿಕೊಂಡು ಸಾಂಪ್ರದಾಯಿಕವಾಗಿಯೂ ಕಾಣಿಸಿಕೊಳ್ಳಬಹುದು. ತ್ರಿವರ್ಣಗಳ ಸಣ್ಣ ಸಣ್ಣ ಸ್ಟಡ್‌ಗಳಿರುವ ಮೂಗುತಿ ಈಗೀಗ ಯುವತಿಯರನ್ನು ಸೆಳೆಯುತ್ತಿವೆ.

ರಾಷ್ಟ್ರಧ್ವಜದ ಬ್ಯಾಡ್ಜ್‌ಗಳು, ಬ್ರೋಚ್‌ಗಳು ಮತ್ತು ಪಿನ್‌ಗಳನ್ನು ಧರಿಸಿಯೂ ದೇಶಭಕ್ತಿಯನ್ನು ಪ್ರದರ್ಶಿಸಬಹುದು. ಇವನ್ನು ಹೆಚ್ಚಾಗಿ ಶರ್ಟ್‌ಗಳು, ಜಾಕೆಟ್‌ಗಳು ಅಥವಾ ಬ್ಲೇಜರ್‌ಗಳ ಮೇಲೆ ಧರಿಸಬಹುದು. ಇಂಥ ಉಡುಗೆ ತೊಟ್ಟಾಗ ಕೈಗೆ ತ್ರಿವರ್ಣದ ಬ್ಯಾಂಡ್ ತೊಡಬಹುದು.

**ಮಾರ್ಗಸೂಚಿ ಹೀಗಿದೆ:** ಫ್ಯಾಷನ್ ಹೆಸರಿನಲ್ಲಿ ದೇಶಧ್ವಜವನ್ನು ಹೇಗೇಗೋ ಬಳಸಿಕೊಳ್ಳುವಂತಿಲ್ಲ. ರಾಷ್ಟ್ರೀಯ ಧ್ವಜವನ್ನು ಬಳಸುವ ಬಗೆ ನಿಯಮ ಹಾಗೂ ಮಾರ್ಗಸೂಚಿಗಳಿವೆ. ಅದನ್ನು ಕಡ್ಡಾಯವಾಗಿ ಪಾಲಿಸಬೇಕು. ಸೊಂಟದ ಕೆಳಗಿನ ಭಾಗದ ಯಾವುದೇ ಬಟ್ಟೆ, ವೇಷಭೂಷಣ, ಆಕ್ಸೆಸರಿಸ್‌ನಲ್ಲಿ ಭಾರತದ ಧ್ವಜವನ್ನು ಬಳಸುವುದನ್ನು ನಿಷೇಧಿಸಲಾಗಿದೆ. ಕುಷನ್, ಕರವಸ್ತ್ರ, ನ್ಯಾಪ್ಕಿನ್ ಮತ್ತು ಒಳ ಉಡುಪುಗಳ ಮೇಲೆ ಧ್ವಜದ ಬಳಕೆಯನ್ನು ನಿರ್ಬಂಧಿಸಲಾಗಿದೆ. ■